# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1364(1556)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ವಿಷಯ : IMA ಹಗರಣದ ಕುರಿತು

(ಅ) ಐ.ಎಂ.ಎ ಹಗರಣದ ಕುರಿತು ಮಾಧ್ಯಮದಲ್ಲಿ ವರದಿಯಾದಂತೆ 2018ರಲ್ಲಿ ಕಮರ್ಷಿಯಲ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಪಿ.ಎಸ್.ಐ ಗಳನ್ನು ಮಾತ್ರವೇ ಅಮಾನತ್ತು ಮಾಡಿದ್ದು 2018ರಲ್ಲಿ ಫ್ರೇಜರ್‌ಟೌನ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿ.ಐ ಮತ್ತು ಎ.ಸಿ.ಪಿಗಳು ತಲಾ 2 ಲಕ್ಷಕ್ಕೂ ಹೆಚ್ಚು ಲಂಚ ಪಡೆದಿರುವ ಕುರಿತು ಆರೋಪಿಯು ಸ್ವ ಇಚ್ಛಾ ಹೇಳಿಕೆ ನೀಡಿದರೂ ಅಮಾನತ್ತುಗೊಳಿಸಿ ವಿಚಾರಣೆ ನಡೆಸದಿರಲು ಕಾರಣವೇನು; ಯಾವಾಗ ಅಮಾನತ್ತುಗೊಳಿಸಿ ವಿಚಾರಣೆ ನಡೆಸಲಾಗುವುದು; ಈ ಮೊತ್ತವು ಹೂಡಿಕೆದಾರರ ಮೊತ್ತವಾಗಿರುವುದರಿಂದ ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು;

(ಆ) ಮಾಧ್ಯಮದಲ್ಲಿ ವರದಿಯಾದಂತೆ 2019ರಲ್ಲಿ ಕಮರ್ಷಿಯಲ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಪಿ.ಎಸ್.ಐ ತನ್ನ ಸಂಬಂಧಿಕರ ಹೆಸರಿನಲ್ಲಿ 50 ಲಕ್ಷಕ್ಕೂ ಹೆಚ್ಚು ಹೂಡಿಕೆಯನ್ನು ಐಎಂಎ ನಲ್ಲಿ ಮಾಡಿರುವ ಕುರಿತು ಆಯೋಪಿಯು ಸ್ವ ಇಚ್ಛಾ ಹೇಳಿಕೆ ನೀಡಿದ್ದು ಈ ಮೊತ್ತದ ಆದಾಯ ಮೂಲದ ಕುರಿತು ತನಿಖೆ ಮಾಡಲು ಈಡಿ, ಎಸಿಬಿ, ಲೋಕಾಯುಕ್ತ, ಆದಾಯ ತೆರಿಗೆ ಇಲಾಖೆಗಳಿಗೆ ಮಾಹಿತಿ ನೀಡಲಾಗಿದೆಯೇ; ಇಲ್ಲವಾದಲ್ಲಿ ಎಂದು ನೀಡಲಾಗುವುದು; ಈ ಹೂಡಿಕೆಯ ಕಮರ್ಷಿಯಲ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಪಿ.ಎಸ್.ಐ ಯವರ ಬೇನಾಮಿ ಹೂಡಿಕೆಯಾಗಿರಬಹುದಾದ ಈ ಕುರಿತು ಸರ್ಕಾರದ ನಿಲುವೇನು; ಕುರಿತು ಸದರಿ ಪಿ.ಎಸ್.ಐ ಯವರನ್ನು ಅಮಾನತ್ತುಗೊಳಿಸಿ ವಿಚಾರಣೆ ನಡೆಸಲಾಗಿದೆಯೇ?